ದಿನಾಂಕಃ 03.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು ಶ್ರೀ. ಡಿ.ಬಿ.ಡಿ. ವಕೀಲರಿಂದ

ಕಳೆದ ಬಾರಿ ನಾನು ನ್ಯಾಯಾಲಯದಲ್ಲಿ ನೀಡಿರುವ ವಿಚಾರಣೆ ಏನೆಂದು ನನಗೆ ಗೊತ್ತಿರುತ್ತದೆ. ತಿಮ್ಮಾಜಮ್ಮ ಹಾಗೂ ಗೌರಮ್ಮ ನನ್ನ ಅಕ್ಕ ತಂಗಿಯರಾಗಬೇಕು. ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಬರಬೇಕೆಂದು ನನ್ನನ್ನು ಬಿಟ್ಟು ಬೇರೆ ಯಾರೂ ಸಹಾ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನಗೆ ಈಗ 69 ವರ್ಷ ವಯಸ್ಸು. ನಾನು ದಿನಾಂಕ : 08.11.1954 ರಲ್ಲಿ ಹುಟ್ಟಿರುತ್ತೇನೆ. ಓ.ಎಸ್. 174/2010 ರ ಪ್ರಕರಣದಲ್ಲಿ ನಾನು 2 ನೇ ಪ್ರತಿವಾದಿ. ಸದರಿ ದಾವೆಯಲ್ಲಿ ಒಟ್ಟು ಕುಟುಂಬದ ಸ್ವತ್ತುಗಳನ್ನು ಸೇರಿಸಿ ದಾವೆಯನ್ನು ಹೂಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಪಾಪೇಗೌಡರವರು ದಾಖಲು ಮಾಡಿದ್ದರು. ಸದರಿಯವರು ನನಗೆ ಚಿಕ್ಕಪ್ಪನ ಮಗನಾಗಬೇಕು. ನನ್ನ ತಂದೆಯವರಿಗೆ ಮೂರು ಜನ ಅಣ್ಣ ತಮ್ಮಂದಿರು. ಮೊದಲನೇಯವರು ನನ್ನ ತಂದೆ, ನಂತರ ಸುಬ್ಬೇಗೌಡ, ನಂತರ ಗೋವಿಂದೇಗೌಡ. ಓ.ಎಸ್. 174/2010 ರ ಪ್ರಕರಣದಲ್ಲಿ ಸಾಕ್ಷಿಯು ನೀಡಿರುವ ಹೇಳಿಕೆ ಮತ್ತು ಪಾಟೀಸವಾಲಿನ ಧೃಢೀಕೃತ ನಕಲನ್ನು ಸಾಕ್ಷಿ ನೋಡಿ ಒಪ್ಪಿರುವ ಕಾರಣ ನಿ.ಡಿ. 1 ಎಂದು ಗುರುತಿಸಲಾಯಿತು. ನಿ.ಡಿ. 1 ರಲ್ಲಿ ಹೇಳಿರುವ ವಿಚಾರಗಳು ಸತ್ಯದಿಂದ ಕೂಡಿರುತ್ತದೆ. ನಿ.ಡಿ. 1 ರ ದಾಖಲೆಯಲ್ಲಿ ನಾನು ಹಾನಗಲ್ ಗ್ರಾಮಕ್ಕೆ ಸೇರಿದಂತೆ ಸರ್ವೆ ನಂ. 20/3 ರಲ್ಲಿ 1 ಎಕರೆ 14 ಗುಂಟೆ ಪೈಕಿ 1 ಎಕರೆ 1 ಗುಂಟೆ ಜಮೀನನ್ನು ವಾದಿ ತನ್ನ ಹಿಸ್ಸೆಗೆ ಬಂದಿದ್ದು ಸಾಗುವಳಿ ಮಾಡುತ್ತಿದ್ದು, ಉಳಿದ 13 ಗುಂಟೆ ಜಮೀನನ್ನು ನಾನು ಮತ್ತು ಒಂದನೇ ಪ್ರತಿವಾದಿ ಸಾಗುವಳಿ ಮಾಡುತ್ತ ಬಂದಿರುತ್ತೇವೆ ಎಂದು ಬರೆಸಿರುತ್ತೇವೆ ಎಂದರೆ ಹೌದು. ಸದರಿ 13 ಗುಂಟೆ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ ದಾಖಲೆ ಇಲ್ಲದ ಕಾರಣ ಸೇರಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಮುಂದುವರೆದು 1 ಎಕರೆ 14 ಗುಂಟೆ ಸ್ವತ್ತಿನ ಬಗ್ಗೆ ದಾಖಲೆ ಇಲ್ಲದ ಕಾರಣ ಸೇರಿಸಿರುವುದಿಲ್ಲ ಎಂದು

ಉತ್ತರಿಸುತ್ತಾರೆ. ಸದರಿ ಸ್ವತ್ತಿನ ದಾಖಲಾತಿಗಳು ಯಾರ ಹೆಸರಿನಲ್ಲಿದೆ ಎಂದು ನನಗೆ ಪೂರ್ಣ ಮಾಹಿತಿ ಇರುವುದಿಲ್ಲ. ಹಾನಗಲ್ ಗ್ರಾಮದ 13 ಗುಂಟೆ ಸ್ವತ್ತು ಈ ಮೊದಲು ನಡೆದಂತಹ ಪ್ರಕರಣದಲ್ಲಿ ನನ್ನ ಭಾಗಕ್ಕೆ ಬಂದಿದ್ದು ಉದ್ದೇಶಪೂರ್ವಕವಾಗಿ ಈ ದಾವೆಯನ್ನು ಸಲ್ಲಿಸಲು ಸದರಿ ಸ್ವತ್ತನ್ನು ವಾದ ಪತ್ರದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ನಮೂದಿಸಿರುವಂತಹ 9 ಐಟಂ ಸ್ವತ್ತುಗಳು ಮೊದಲು ಇತ್ತು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿನ ದಾವಾ ಅನುಸೂಚಿ 5 ರಿಂದ 9 ನೇ ಸ್ವತ್ತುಗಳು ನನ್ನ ಅಣ್ಣ ಲೇಟ್. ತಿಮ್ಮಪ್ಪಗೌಡರ ಸ್ವಯಾರ್ಜಿತ ಸ್ವತ್ತುಗಳಾದ ಕಾರಣ ಓ.ಎಸ್. 174/2010 ನೇ ಪ್ರಕರಣದಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. ತಿಮ್ಮಪ್ಪಗೌಡ ಮೃತ ಪಟ್ಟ ನಂತರ 1 ನೇ ಪ್ರತಿವಾದಿಯು ಸ್ವತ್ತಿನ ಖಾತೆಗೆ ಅರ್ಜಿ ಸಲ್ಲಿಸಿದಾಗ ನಾನು ತಕರಾರು ಸಲ್ಲಿಸಿದ್ದೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಸ್ವತ್ತಾದ ಕಾರಣ ತಕರಾರು ಸಲ್ಲಿಸಿದ್ದೆ ಎಂದು ಉತ್ತರಿಸುತ್ತಾರೆ. ತಹಶೀಲ್ದಾರ್ ರವರ ಆದೇಶದಲ್ಲಿ ಸ್ವತ್ತುಗಳು ತಿಮ್ಮಪ್ಪಗೌಡರ ಸ್ವಯಾರ್ಜಿತ ಸ್ವತ್ತುಗಳಾದ ಕಾರಣ 1 ನೇ ಪ್ರತಿವಾದಿ ಹೆಸರಿಗೆ ಖಾತೆ ಮಾಡಿವುದು ಆದೇಶ ಮಾಡಿರುವುದು ಸುಳ್ಳಿನಿಂದ ಕೂಡಿರುತ್ತದೆ. ದಾಖಲಾತಿಗಳನ್ನು ಪರಿಶೀಲಿಸಿ ತಾಲೂಕು ದಂಡಾಧಿಕಾರಿಗಳು ಆದೇಶ ಮಾಡಿರುವುದು ಸರಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದಂತಹ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಸರ್ವೆ ನಂಬರ್ ಹೇಳಬಲ್ಲೆ. ಆರ್.ಎ. 98/2010 ರಂತೆ ನನ್ನ ಅಣ್ಣ ಹಾಗೂ ನನ್ನ ವಿರುದ್ದ ಪ್ರಕರಣ ನಡೆಯಿತು ಎಂದರೆ ಸಾಕ್ಷಿಯು ನನ್ನ ಅಣ್ಣ ಪ್ರಕರಣವನ್ನು ನಡೆಸುತ್ತಿದ್ದ ಕಾರಣ ನನಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಹಾನಗಲ್ ಜಮೀನು ಮಲ್ಲೇಶ ಬಿನ್ ಮುತ್ತೇಗೌಡರವರ ಹೆಸರಿನಲ್ಲಿ ಇದ್ದು ಅದನ್ನು ರದ್ದುಪಡಿಸಲು ಅಪೀಲು ಹಾಕಲಾಗಿತ್ತು ಎಂದರೆ ನನ್ನ ಅಣ್ಣನಿಗೆ ಗೊತ್ತಿರುತ್ತದೆ. ಹಾನಗಲ್ ಜಮೀನಿನ ಸ್ವತ್ತುಗಳನ್ನು ಹಾಗೂ ಸೀಬಹಳ್ಳಿ ಗ್ರಾಮದ ಸ್ವತ್ತುಗಳನ್ನು ನಾನೇ ಅನುಭವಿಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 5 ರ ಸ್ವತ್ತಿನಲ್ಲಿ ತೆಂಗು ಮತ್ತು ಅಡಿಕೆ ಗಿಡ ಇರುತ್ತದೆ. 200 ಅಡಿಕೆ ಗಿಡ, 35 ತೆಂಗಿನ ಗಿಡ ಇರಬಹುದು. ದಾವಾ ಅನುಸೂಚಿ 5 ರ ಸ್ವತ್ತನ್ನು ನಾನೇ ಅನುಭವಿಸುತ್ತಿದ್ದು, ಪ್ರತಿವಾದಿಗಳಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಿಂದ 6 ರಲ್ಲಿನ ಕ್ರಯಪತ್ರದಲ್ಲಿನ ಸ್ವತ್ತುಗಳು ಒಟ್ಟು ಕುಟುಂಬಕ್ಕೆ ಸೇರಿದಂತಹ ಸ್ವತ್ತುಗಳಾಗಿರುತ್ತದೆ. ಕ್ರಯಪತ್ರಗಳು ನನ್ನ ಹಿರಿಯಣ್ಣ

ನಾದ ತಿಮ್ಮಪ್ಪಗೌಡನ ಹೆಸರಿಗೆ ಆಗಿರುತ್ತದೆ. ಒಟ್ಟು ಕುಟುಂಬದ ವ್ಯವಹಾರಗಳನ್ನು ನನ್ನ ಅಣ್ಣ ಮಾಡುತ್ತಿದ್ದ ಕಾರಣ ಕ್ರಯಪತ್ರಗಳನ್ನು ಅವರ ಹೆಸರಿಗೆ ಮಾಡಿಸಲಾಗಿರುತ್ತದೆ . ನನ್ನ ಹೆಸರಿಗೆ ಇರುವುದಿಲ್ಲ. ನಿಪಿ 1 ರಿಂದ 6 ರ ಸ್ವತ್ತುಗಳನ್ನು ತಿಮ್ಮಪ್ಪಗೌಡ ಶಿಕ್ಷಕ ವೃತ್ತಿಯಿಂದ ಬಂದಂತಹ ಆದಾಯದಿಂದ ಖರೀದಿ ಮಾಡಿದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 9 ನೇ ಸ್ವತ್ತು ತಿಮ್ಮಪ್ಪಗೌಡನ ಮಗನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನಾನು ಬೇಡಿಗನಹಳ್ಳಿಕೊಪ್ಪಲು ಗ್ರಾಮದಲ್ಲಿ ವಾಸ ಇದ್ದೇನೆ. ಬೇಡಿಗನಹಳ್ಳಿಕೊಪ್ಪಲು ಗ್ರಾಮದಲ್ಲಿ ನಾನು, ನನ್ನ ಮಕ್ಕಳು ವಾಸ ಇದ್ದೇವೆ. ನಾನು ಒಟ್ಟು ಕುಟುಂಬದಲ್ಲಿ ವಾಸ ಇಲ್ಲದೇ ಇದ್ದರು ಸಹಾ ಒಟ್ಟು ಕುಟುಂಬದಲ್ಲಿ ವಾಸ ಇದ್ದೆ ಎಂದು ಸುಳ್ಳು ದಾವೆಯನ್ನು ತಂದಿರುತ್ತೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರಿಕೆಯಲ್ಲಿ ನಮೂದಿಸಿರುವಂತಹ ಅಂಶಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನನಗೆ ಯಾವುದೇ ಹಿಸ್ಸೆ ಬರಬೇಕಿಲ್ಲದೇ ಇದ್ದರು ಸಹಾ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ